**ದಿನಾಂಕಃ 28.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

1 ನೇ ಪ್ರತಿವಾದಿ ಶಾರದಮ್ಮರವರ ಗಂಡ ರಾಮಯ್ಯ ಅವರ ತಂದೆಯ ಹೆಸರು ರಂಗಪ್ಪ ಎಂದರೆ ಸರಿ. ರಂಗಪ್ಪರವರಿಗೆ ಒಟ್ಟು 3 ಜನ ಮಕ್ಕಳು. ಅವರುಗಳೆಂದರೆ ರಾಮಯ್ಯ, ಎರಕಳಪ್ಪ, ದೊಡ್ಡಪಿಳ್ಳಯ್ಯ. ರಂಗಪ್ಪರವರ ತಂದೆಯ ಹೆಸರು ಗೊತ್ತಿಲ್ಲ. ರಂಗಪ್ಪರವರ ಅಜ್ಜ ಹಾಗೂ ಮುತ್ತಜ್ಜನ ಹೆಸರು ಗೊತ್ತಿಲ್ಲ. ದಾವಾಸ್ವತ್ತುಗಳು ಮೂಲ ರಂಗಪ್ಪರವರ ಹಾಗೂ ಅವರ ತಂದೆಗೆ ಹಾಗೂ ಅವರ ಅಜ್ಜನಿಗೆ ಬಂದ ರೀತಿ ನನಗೆ ಗೊತ್ತಿಲ್ಲ. ವಾದ ಪತ್ರದ 6 ನೇ ಕಂಡಿಕೆಯಲ್ಲಿ ರಂಗಪ್ಪ ಹಾಗೂ 2 ರಿಂದ 4 ನೇ ಪ್ರತಿವಾದಿಗಳು ಅವರ ಪೂರ್ವಜರಿಂದ ಆಸ್ತಿಗಳನ್ನು ಪಡೆದುಕೊಂಡಿರುತ್ತಾರೆ ಎಂದು ನಮೂದಿಸಿದ್ದು, ಅದನ್ನು ಸಾಬೀತು ಪಡಿಸಲು ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ದಾಖಲೆಗಳನ್ನು ಹಾಜರುಪಡಿಸುತ್ತೇನೆ ಎಂದು ಸಾಕ್ಷಿಯು ನುಡಿಯುತ್ತಾರೆ. ಸದರಿ ದಾವೆಯಲ್ಲಿ ರಾಮಯ್ಯರವರ ಮೂಲಕ ಪಾಲು ಬರಬೇಕೆಂದು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ರಾಮಯ್ಯರವರಿಗೆ ಯಾವ ಮೂಲಕ ಆಸ್ತಿ ಬಂದಿದೆಯಾ ಎಂದು ತೋರಿಸಿದ್ದೀರಾ ಎಂದರೆ ಸಾಕ್ಷಿಯು ಉತ್ತರಿಸಿರುವುದಿಲ್ಲ.

ನಾನು ನನ್ನ ವಾದ ಪತ್ರದಲ್ಲಿ ಯಾವ ರೀತಿ ಬಂದಿದೆ ಎಂದು ನಮೂದು ಮಾಡದೇ ನಿಪಿ-18 ರ ಪ್ರಕಾರ ದಿಃ 24.07.1961 ರಲ್ಲಿ ಆಗಿರುವಂತಹ ವಿಭಾಗ ಪತ್ರವನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ದಾವೆಯನ್ನು ಹೂಡುವ ಸಮಯಕ್ಕೆ ನನ್ನ ವಾದಪತ್ರದಲ್ಲಿ ಸದರಿ ದಿನಾಂಕದಂದು ವಿಭಾಗವಾಗಿ ರಾಮಯ್ಯರವರು ಆಸ್ತಿ ಬಂದಿರುವ ವಿಷಯವನ್ನು ನಮೂದು ಮಾಡಲು ತೊಂದರೆ ಇತ್ತಾ ಎಂದರೆ ದಾವೆಯಲ್ಲಿ ನಮೂದು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ವಾದ ಪತ್ರದಲ್ಲಿ ರಾಮಯ್ಯರವರ ಹೆಸರಿನಲ್ಲಿ ಖಾತೆ ಇರುವ ವಿಷಯವನ್ನು ನಮೂದು ಮಾಡಿರುತ್ತೇನೆ ಎಂದರೆ ಸರಿ. ನಿಪಿ-18 ರಲ್ಲಿ ಸಿ-ಷೆಡ್ಯೂಲ್‌ನಲ್ಲಿ

ತೋರಿಸಿದಂತೆ ರಾಮಯ್ಯರವರು ಸ್ವಯಾರ್ಜಿತ ಮತ್ತು ಒಟ್ಟು ಕುಟುಂಬದ ಆಸ್ತಿಯಲ್ಲಿ ಪಾಲು ಪಡೆದಿರುತ್ತಾರೆ ಎಂದು ಬರೆದಿರುತ್ತಾರೆ ಎಂದರೆ ಸರಿ.

ಸಂಜೀವಮ್ಮರವರು ರಾಮಯ್ಯರವರ ಮೊದಲನೇ ಹೆಂಡತಿ ಎಂದು ತೋರಿಸಲು ದಾಖಲೆಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಆ ಸಮಯದಲ್ಲಿ ಯಾವುದೇ ದಾಖಲಾತಿಗಳು ಇರಲಿಲ್ಲ ಎಂದು ನುಡಿಯುತ್ತಾರೆ. ಸಂಜೀವಮ್ಮರವರು ಯಾವಾಗ ನಿಧನ ಹೊಂದಿದ್ದಾರೆ ಎಂದು ವಾದ ಪತ್ರದಲ್ಲಿ ಬರೆಸಿರಬಹುದು ಎಂದು ನುಡಿಯುತ್ತಾರೆ. ಸಂಜೀವಮ್ಮರವರು ಯಾವಾಗ ಮತ್ತು ಎಲ್ಲಿ ನಿಧನ ಹೊಂದಿರುತ್ತಾರೆ ಎಂದು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಪಡಿತರಚೀಟಿ ಮತ್ತು ಮತದಾರರ ಪಟ್ಟಿಗಳು 1956 ರಿಂದ ಚಾಲ್ತಿಯಲ್ಲಿರುತ್ತವೆ ಎಂದರೆ ಸರಿ. ಸಂಜೀವಮ್ಮರವರು ರಾಮಯ್ಯರವರ ಧರ್ಮಪತ್ನಿಯಾಗಿದ್ದರು ಎಂದು ತೋರಿಸಲು ಮತದಾರರ ಪಟ್ಟಿ ಅಥವಾ ಪಡಿತರಚೀಟಿಯನ್ನು ಹಾಜರುಪಡಿಸಿದ್ದೀರಾ ಅಥವಾ ಹಾಜರುಪಡಿಸಲಾಗುತ್ತದೆಯೇ ಅಥವಾ ಅದನ್ನು ತಿಳಿಸಿರುತ್ತೀರಾ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ನಮ್ಮ ವಕೀಲರನ್ನು ಕೇಳಬೇಕು ಎಂದು ನುಡಿಯುತ್ತಾರೆ. ನನಗೆ ತಿಳಿದಿರುವ ಹಾಗೆ ಸದರಿ ವಿಷಯವನ್ನು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

ರಾಮಯ್ಯ ಮತ್ತು ಸಂಜೀವಮ್ಮರವರಿಗೆ ರತ್ನಮ್ಮರವರು ಜನಿಸಿದರು ಎಂದು ನನ್ನ ವಾದಪತ್ರದಲ್ಲಿ ಹೇಳಿದ್ದು, ರತ್ನಮ್ಮರವರು ಎಲ್ಲಿ ಮತ್ತು ಯಾವಾಗ ಜನಿಸಿದ್ದರು ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಯಾವ ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಾ ಎಂದು ತೋರಿಸಬಲ್ಲೀರಾ ಎಂದರೆ ವಕೀಲರನ್ನು ಕೇಳಬೇಕು ಎಂದು ನುಡಿಯುತ್ತಾರೆ. ರತ್ನಮ್ಮರವರು ಎಲ್ಲಿ ಮತ್ತು ಯಾವಾಗ, ಯಾರಿಗೆ ಜನಿಸಿದರು ಎಂದು ತೋರಿಸಲು ನಿಖರವಾದ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಉತ್ತರಿಸಿರುವುದಿಲ್ಲ. ರತ್ನಮ್ಮರವರು ಅರಳುಮಲ್ಲಿಗೆ ಗ್ರಾಮದಲ್ಲಿ ಯಾವುದೇ ರೀತಿಯ

ಶಿಕ್ಷಣವನ್ನು ಪಡೆದಿರುವುದಿಲ್ಲ ಹಾಗೂ ಯಾವುದೇ ಶಾಲೆಗೆ ಹೋಗಿರುವುದಿಲ್ಲ. ಸದರಿ ವಿಚಾರವನ್ನು ರತ್ನಮ್ಮರವರು ದಾವೆಯನ್ನು ಹೂಡುವ ಸಮಯದಲ್ಲಿ ವಾದಪತ್ರದಲ್ಲಿ ತಿಳಿಸಿರುವುದಿಲ್ಲ.

ಶಾರದಮ್ಮರವರನ್ನು ರಾಮಯ್ಯರವರು ಯಾವ ವರ್ಷದಲ್ಲಿ ಮದುವೆಯಾಗಿರುತ್ತಾರೆ ಎಂದು ಗೊತ್ತಿಲ್ಲ. ರತ್ನಮ್ಮರವರು ದಾವೆಯನ್ನು ಪ್ರತಿವಾದಿ-1 ರಿಂದ 4 ರವರ ಮೇಲೆ ಮಾತ್ರ ಹೂಡಿರುತ್ತಾರೆ ಎಂದರೆ ಸರಿ. ದಾವೆಯು ನಡೆಯುವ ಮಧ್ಯದಲ್ಲಿ ಪ್ರತಿವಾದಿ-5 ಮತ್ತು 6 ರವರನ್ನು ಸೇರ್ಪಡೆ ಮಾಡಲಾಗಿರುತ್ತದೆ ಎಂದರೆ ಸರಿ. ನಿಪಿ-1 ರಲ್ಲಿ ಪ್ರತಿವಾದಿ-5 ಮತ್ತು 6 ರವರು ಯಾವ ರೀತಿ ಕುಟುಂಬದ ಸದಸ್ಯರಾಗಿರುತ್ತಾರೆ ಎಂದು ಹಾಗೂ ದಾವಾಸ್ವತ್ತಿನಲ್ಲಿ ಅವರಿಗೆ ಯಾವ ರೀತಿ ಹಕ್ಕು ಅಥವಾ ಆಸಕ್ತಿ ಇರುತ್ತದೆ ಎಂದು ತೋರಿಸಿದ್ದೀರಾ ಎಂದರೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಿಚಾರವಾಗಿ ಯಾವುದೇ ದಾಖಲಾತಿಗಳನ್ನು ಹಾಗೂ ವಿಚಾರವನ್ನು ಸಲ್ಲಿಸಿರುವುದಿಲ್ಲ ಹಾಗೂ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. 5 ನೇ ಮತ್ತು 6 ನೇ ಪ್ರತಿವಾದಿಗಳು ಗುಪ್ತಕೋಡಿಗೇಹಳ್ಳಿ, ತೆರೆಯೂರಿನಲ್ಲಿ ವಾಸವಾಗಿರುತ್ತಾರೆ ಎಂದು ನನ್ನ ವಾದ ಪತ್ರದಲ್ಲಿ ತಿಳಿಸಲಾಗಿದೆ ಎಂದರೆ ಸರಿ. ನನ್ನ ತಾಯಿ 1 ನೇ ವಾದಿಯು ಸಹ ಅದೇ ಊರಿನಲ್ಲಿ ವಾಸವಾಗಿದ್ದರು ಎಂದರೆ ಸರಿ. 5 ಮತ್ತು 6 ನೇ ಪ್ರತಿವಾದಿಗಳು ಕುಟುಂಬಕ್ಕೆ ಸಂಬಂಧವಿಲ್ಲದಿದ್ದರೂ ಹಾಗೂ ದಾವಾ ಆಸ್ತಿಯಲ್ಲಿ ಯಾವುದೇ ರೀತಿಯ ಹಕ್ಕು ಇಲ್ಲದಿದ್ದರೂ ಸಹ ಅವರ ಜೊತೆ ಶಾಮೀಲಾಗಿ ಅವರನ್ನು ದಾವೆಯಲ್ಲಿ ಸೇರಿಸಲಾಗಿರುತ್ತದೆ ಎಂದರೆ ಸರಿಯಲ್ಲ.

ಮುಖ್ಯ ವಿಚಾರಣೆಯ 5 ಮತ್ತು 6 ನೇ ಪ್ಯಾರಾದಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ.

ದಾವೆಯನ್ನು ಸಲ್ಲಿಸಿದ ನಂತರ 1 ನೇ ಪ್ರತಿವಾದಿಯು ಅವರ ಗಂಡನಾದ ರಾಮಯ್ಯರವರು ಅವರ ಹೆಸರಿಗೆ ದಿಃ 23.03.2013 ರಲ್ಲಿ ವಿಲ್ ಮಾಡಿರುವ ವಿಷಯದ

ಕುರಿತು ತಿಳಿಸಿರುವ ಬಗ್ಗೆ ನಾನು ರೀ-ಜಾಯಿಂಡರ್ ನ್ನು ಸಲ್ಲಿಸಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ನನ್ನ ಮುಖ್ಯವಿಚಾರಣೆಯಲ್ಲಿ ರಾಮಯ್ಯರವರಿಗೆ ವಿಲ್ ಬರೆಯಲು ಅಧಿಕಾರವಿರಲಿಲ್ಲ ಎಂದು ತಿಳಿಸಿದ್ದು, ಸದರಿ ವಿಷಯವನ್ನು ನನ್ನ ವಾದ ಪತ್ರದಲ್ಲಿಯೂ ಸಹ ತಿಳಿಸಿರುತ್ತೇನೆ. ನನ್ನ ವಾದ ಪತ್ರದಲ್ಲಿ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ರಾಮಯ್ಯರವರು ಉದ್ದೇಶಪೂರ್ವಕವಾಗಿ ಹಕ್ಕು ಇಲ್ಲದೇ ಇದ್ದರೂ ಸಹ ವಿಲ್ ಮಾಡಿರಮ ವಿಷಯವನ್ನು ತಿಳಿಸಿರುತ್ತೇನೆ. ನನ್ನ ವಾದ ಪತ್ರದಲ್ಲಿ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ರಾಮಯ್ಯರವರು ದಾವಾಸ್ವತ್ತು ವಿಭಾಗದ ಮೂಲಕ ಬಂದಿರುವ ವಿಷಯವನ್ನು ತಿಳಿಸಿರುವುದಿಲ್ಲ ಎಂದರೆ ಸರಿ.

1998-1999 ರಿಂದ ದಾವಾಸ್ವತ್ತು ರಾಮಯ್ಯರವರ ಹೆಸರಿನಲ್ಲಿ ಬರುತ್ತಿತ್ತು ಎಂದು ತೋರಿಸಲು ಖಾತಾ ಮತ್ತು ಮ್ಯುಟೇಷನ್ ಪ್ರತಿಗಳನ್ನು ಹಾಜರುಪಡಿಸಿರುತ್ತೇವೆ ಎಂದರೆ ಸರಿ. ದಿಃ 28.03.2003 ರಂದು ವಿಲ್ ಬರೆದ ಸಮಯಕ್ಕೆ ರಾಮಯ್ಯರವರ ಹೆಸರಿನಲ್ಲಿ ದಾವಾಸ್ವತ್ತು ಇತ್ತು ಎಂದರೆ ಸರಿ. ಸದರಿ ವಿಲ್ ಪ್ರತಿಯನ್ನು ನಾನು ನೋಡಿರುವುದಿಲ್ಲ. ಸದರಿ ವಿಲ್ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ರೀತಿ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**C/C ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ದೊಡ್ಡಬಳ್ಳಾಪುರ .**